

بسم اللہِ الرّحمٰنِ الرّحیم

# ಸಹಾಬರ ಶ್ರೇಷ್ಠತೆ

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಜ಼್ರತ್ ಮಿರ್ಜ಼ಾ ಮಸ್‌ರೂರ್ ಅಹ್ಮದ್**, ಅವರು ಯು.ಕೆ.ಯ ಇಸ್ಲಾಮಾಬಾದ್‌ನ **'ಮಸ್ಜಿದ್ ಮುಬಾರಕ್'** ನಿಂದ **20–08–2021** ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

أَشْهَدُ أَنْ لَّا إِلٰهَ إِلَّا اللّٰهُ وَحْدَهُ لَا شَرِيْكَ لَهُ وَأَشْهَدُ أَنَّ مُحَمَّدًا عَبْدُهُ وَرَسُوْلُهُ۔

أَمَّا بَعْدُ فَأَعُوْذُ بِاللّٰهِ مِنَ الشَّيْطٰنِ الرَّجِيْمِ۔ بِسْمِ اللّٰهِ الرَّحْمٰنِ الرَّحِيْمِ۔

اَلْحَمْدُ لِلّٰهِ رَبِّ الْعَالَمِيْنَ۔ اَلرَّحْمٰنِ الرَّحِيْمِ۔ مٰلِكِ يَوْمِ الدِّيْنِ۔ إِيَّاكَ نَعْبُدُ وَإِيَّاكَ نَسْتَعِيْنُ۔

اِهْدِنَا الصِّرَاطَ الْمُسْتَقِيْمَ۔ صِرَاطَ الَّذِيْنَ أَنْعَمْتَ عَلَيْهِمْ غَيْرِ الْمَغْضُوْبِ عَلَيْهِمْ وَلَا الضَّآلِّيْنَ۔

*(ತಶಹ್ಹುದ್, ತಅವ್ವುಧ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಜ಼್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಜ಼ೀಜ಼್ ಹೀಗೆ ಹೇಳಿದರು:*

ಹಜ಼್ರತ್ ಉಮರ್ ರಜ಼ಿಯಲ್ಲಾಹು ಅನ್‌ಹುರ ಖಿಲಾಫತ್ ಕಾಲದಲ್ಲಿ ನಡೆದ ಯುದ್ಧಗಳ ಬಗ್ಗೆ ಪ್ರಸ್ತಾಪ ನಡೆಯುತ್ತಿತ್ತು. ಅವುಗಳಲ್ಲಿ ಒಂದು ಜುಂದಿ ಸಾಬೂರ್ ಯುದ್ಧವಾಗಿದೆ. ಸಾಬೂರ್ ಖ಼ೂಜ಼ಿಸ್ತಾನಿನ ಒಂದು ಪಟ್ಟಣವಾಗಿತ್ತು. ಸಾಸಾನಿಯವರ ಗ್ರಾಮಗಳ ಮೇಲೆ ಹಜ಼್ರತ್ ಅಬೂ ಸಬ್ರ ಬಿನ್ ರಹಮ್ ವಿಜಯ ಸಾಧಿಸಿದ ನಂತರ ಸೈನ್ಯದೊಂದಿಗೆ ಮುಂದೆ ಸಾಗಿದರು. ರಾತ್ರಿ ಹಗಲು ಶತ್ರುಗಳೊಂದಿಗೆ ಯುದ್ಧಗಳು ನಡೆಯುತ್ತಿದ್ದುವು. ಆದರೆ ಶತ್ರುಗಳು ತಮ್ಮ ಜಾಗದಲ್ಲೇ ಸ್ಥಿರವಾಗಿದ್ದರು. ಒಂದು ದಿನ ಯಾವುದೋ ಸಾಮಾನ್ಯ ಮುಸ್ಲಿಮನ ಕಡೆಯಿಂದ ಅಭಯ ನೀಡುವ ಮಾತು ನಡೆಯಿತು. ಅದನ್ನು ಶತ್ರುಗಳು ಕೂಡಲೇ ಸ್ವೀಕರಿಸಿದರು ಮತ್ತು ಪಟ್ಟಣದ ಬಾಗಿಲುಗಳನ್ನು ತೆರೆದರು. ನಿಮಗೆ ಏನಾಯಿತು ಎಂದು ಮುಸ್ಲಿಮರು ಶತ್ರುಗಳೊಡನೆ ಕೇಳಿದಾಗ ಅವರು ಹೇಳಿದರು: ನೀವು ನಮಗೆ ಅಭಯ ನೀಡಿರುವಿರಿ ಮತ್ತು ನಾವು ಅದನ್ನು ಸ್ವೀಕರಿಸಿದ್ದೇವೆ. ನಾವು ಹಾಗೆ ಮಾಡಿಲ್ಲವೆಂದು ಮುಸ್ಲಿಮರು ಹೇಳಿದರು. ಒಬ್ಬ ಗುಲಾಮನ ಕಡೆಯಿಂದ ಈ ಮಾತು ನಡೆದಿತ್ತು ಎಂದು ಅನಂತರ ತನಿಖೆ ನಡೆಸಿದಾಗ ಗೊತ್ತಾಯಿತು. ಹಜ಼್ರತ್ ಮುಸ್ಲಿಹ್ ಮೌಊದ್(ರ) ಈ ಘಟನೆಯನ್ನು ಪ್ರಸ್ತಾಪಿಸುತ್ತಾ ಹೇಳುತ್ತಾರೆ: ಹಜ಼್ರತ್ ಉಮರ್(ರ)ರಿಗೆ ಇದರ ಬಗ್ಗೆ ಗೊತ್ತಾದಾಗ ಅವರು ಹೇಳಿದರು: ಒಬ್ಬ ಮುಸ್ಲಿಮನು ಕೊಟ್ಟ ಮಾತನ್ನು ಸುಳ್ಳಾಗಿಸಲು ನನಗೆ ಸಾಧ್ಯವಲ್ಲ. ಹಬ್‌ಶಿ ಗುಲಾಮ ಮಾಡಿದ ಒಪ್ಪಂದವನ್ನು ನೀವು ಅಂಗೀಕರಿಸಬೇಕಾಗುವುದು. ಆದರೆ ಇನ್ನು ಮುಂದೆ ಸೇನಾಧಿಪತಿಯಲ್ಲದೇ ಬೇರೆ ಯಾರೂ ಯಾವುದೇ ಸಮುದಾಯದೊಂದಿಗೆ ಒಪ್ಪಂದ ಮಾಡಬಾರದು ಎಂದು ಘೋಷಿಸಬೇಕು.

ಇರಾನ್ ವಿಜಯದ ಕಾರಣಗಳ ಪ್ರಸ್ತಾಪದಲ್ಲಿ ಹೀಗೆ ಹೇಳಲಾಗಿದೆ: ಇರಾಕ್ ಮತ್ತು ಅಹ್‌ವಾಜ಼ಿನ ಯುದ್ಧದೊಂದಿಗೆ ಈ ಘೋರ ಯುದ್ಧ ಕೊನೆಗೊಳ್ಳಲಿ ಎಂದು ಹಜ಼್ರತ್ ಉಮರ್(ರ)ರ ಹೃದಯ ಬಯಸುತ್ತಿತ್ತು. ಆದರೆ ಇರಾನಿನ ಆಡಳಿತವು ನಿರಂತರವಾಗಿ ನಡೆಸುತ್ತಿದ್ದ ಯುದ್ಧದ ಕಾರ್ಯಚರಣೆಗಳ ಕಾರಣದಿಂದ ಅವರ ಈ ಬಯಕೆ ಈಡೇರಲಿಲ್ಲ. ಹಿಜರೀ 17ರಲ್ಲಿ ಯುದ್ಧದ ಮೈದಾನದಿಂದ ಸೈನ್ಯದ ಸರದಾರರ ಒಂದು ಸಂಘವು ಹಜ಼್ರತ್ ಉಮರ್(ರ)ರ ಸನ್ನಿಧಿಯಲ್ಲಿ ಹಾಜರಾಯಿತು. ಮುಸ್ಲಿಮರು ಜಯಿಸಿದ ಪ್ರದೇಶಗಳಲ್ಲಿ ಪದೇ ಪದೇ ದಂಗೆಯೇಳುವ ಕಾರಣವನ್ನು ಹಜ಼್ರತ್ ಉಮರ್(ರ) ಅವರೊಡನೆ ಕೇಳಿದರು. ಗೆದ್ದ ಪ್ರದೇಶಗಳ ನಿವಾಸಿಗಳಿಗೆ ತೊಂದರೆ ಉಂಟಾಗಲು ಮುಸ್ಲಿಮರು ಕಾರಣವಾಗುತ್ತಿರಬಹುದು ಎಂಬ ಸಂಶಯವನ್ನು ಹಜ಼್ರತ್ ಉಮರ್(ರ) ವ್ಯಕ್ತಪಡಿಸಿದರು. ಎಲ್ಲ ಸರದಾರರು ಈ ಮಾತನ್ನು ನಿರಾಕರಿಸಿದರು. ಅಹ್‌ನಫ್ ಬಿನ್ ಖೈಸ್ ಹೇಳಿದರು: ಅಮೀರುಲ್ ಮೂಅ್‌ಮಿನೀನ್, ನೀವು ನಮ್ಮನ್ನು ಇನ್ನೂ ಮುಂದಕ್ಕೆ ಹೋಗುವುದನ್ನು ತಡೆದಿದ್ದೀರಿ. ಆದರೆ ಇರಾನಿನ ಅರಸ ಜೀವಂತವಾಗಿರುವ ತನಕ ನಮ್ಮೊಡನೆ ಹೋರಾಟವನ್ನು ಜಾರಿಯಲ್ಲಿರಿಸುವರು. ನಿಮ್ಮ ಆದೇಶದ ಪ್ರಕಾರ ನಾವು ಯಾವುದೇ ಪ್ರದೇಶವನ್ನು ಸ್ವತಃ ಪಡೆಯಲಿಲ್ಲ. ಬದಲಾಗಿ ಶತ್ರುಗಳು ಆಕ್ರಮಣ ನಡೆಸಿದ ಕಾರಣ ಅವುಗಳನ್ನು ಗೆಲ್ಲಲಾಯಿತು. ನಾವು ದಾಳಿ ನಡೆಸಿ ಫಾರಿಸಿನ ಅರಸನನ್ನು ಹೊರಹಾಕಲು ನೀವು ನಮಗೆ ಅನುಮತಿ ನೀಡುವ ತನಕ ಶತ್ರುಗಳ ಈ ರೀತಿ ಜಾರಿಯಲ್ಲಿರುವುದು. ಹಜ಼್ರತ್ ಉಮರ್(ರ) ಈ ಅಭಿಪ್ರಾಯವನ್ನು ಸರಿಯೆಂದು ಒಪ್ಪಿದರು. ಆದರೂ ಅದರ ಬಗ್ಗೆ ಕಾರ್ಯರೂಪದ ತೀರ್ಮಾನವನ್ನು ಹಿಜರೀ 21ರಲ್ಲಿ ನಹಾವಂದಿನ ಯುದ್ಧದ ನಂತರ ಮಾಡಿದರು.

ಹುಜ಼ೂರ್ ಹೇಳಿದರು: ವಿನಾಕಾರಣ ಯುದ್ಧ ಮಾಡಲು ನೆಪವನ್ನು ಮುಂದಿರಿಸುವ ಈಗಿನ ಮುಸ್ಲಿಮರಿಗೂ, ಅದೇ ರೀತಿ ಇಸ್ಲಾಮಿನ ಮೇಲೆ ಆಕ್ಷೇಪವೆತ್ತುವ ಜನರಿಗೂ ಇಲ್ಲಿ ಉತ್ತರವಿದೆ. ಮುಸ್ಲಿಮರು ಎಂದಿಗೂ ಪ್ರದೇಶಗಳನ್ನು ವಶಪಡಿಸಿಕೊಳ್ಳಲಿಕ್ಕಾಗಿ ಅಥವಾ ರಾಜ್ಯಗಳ ಮೇಲೆ ಜಯ ಗಳಿಸಲು ಯುದ್ಧಗಳನ್ನು ಮಾಡಿರಲಿಲ್ಲ.

ಇರಾನಿನ ಮೇಲಿನ ವಿಜಯಗಳಲ್ಲಿ ಖಾದಿಸಿಯ, ಜಲೂಲ ಮತ್ತು ನಹಾವಂದಿನ ಯುದ್ಧಗಳಿಗೆ ವಿಧಿನಿರ್ಣಾಯಕ ಸ್ಥಾನವಿದೆ. ನಹಾವಂದಿನ ಯುದ್ಧ ಇರಾನಿಯರ ಕಡೆಯಿಂದ ಆಕ್ರಮಣದ ಕೊನೆಯ ಪ್ರಯತ್ನವಾಗಿತ್ತು. ಹಮ್‌ದಾನ್ ರಾಜ್ಯದ ರಾಜಧಾನಿಯಾದ ಹಮ್‌ದಾನಿನಿಂದ ಸುಮಾರು ಎಪ್ಪತ್ತು ಕಿಲೋಮೀಟರ್ ದೂರದಲ್ಲಿ ದಕ್ಷಿಣ ದಿಕ್ಕಿನಲ್ಲಿ ನಹಾವಂದ್ ಇದೆ. ಇರಾನಿನ ಅರಸನಾದ ಯಜ಼್‌ದಜರ್‌ದ್ ಬಹಳ ಕ್ರಿಯಾಶೀಲರಾಗಿ ಮುಸ್ಲಿಮರನ್ನು ಎದುರಿಸಲು ಪತ್ರಗಳ ಮೂಲಕ ಖ಼ುರಾಸಾನಿನಿಂದ ಸಿಂಧ್ ತನಕ ಒಂದು ಚಲನೆಯನ್ನು ಉಂಟುಮಾಡಿದರು. ಎಲ್ಲ ಕಡೆಯಿಂದಲೂ ಇರಾನಿನ ಸೈನ್ಯ ಎದ್ದು ನಹಾವಂದಿನಲ್ಲಿ ಒಟ್ಟು ಸೇರಿತ್ತು. ಈ ಸೈನ್ಯದ ಬಗ್ಗೆ ಹಜ಼್ರತ್ ಸಅದ್(ರ) ಹಜ಼್ರತ್ ಉಮರ್(ರ)ರಿಗೆ ತಿಳಿಸಿದರು. ಹಜ಼್ರತ್ ಉಮರ್(ರ) ಹಜ಼್ರತ್ ಸಅದ್‌ರನ್ನು ವಜಾಗೊಳಿಸಿ ಈ ಮುಖ್ಯ ಹುದ್ದೆಯನ್ನು ಹಜ಼್ರತ್ ಅಮ್ಮಾರ್ ಬಿನ್ ಯಾಸಿರಿಗೆ ನೀಡಿದರು. ಮದೀನದಲ್ಲಿ ಹಜ಼್ರತ್ ಉಮರ್(ರ) ಸಮಾಲೋಚನೆಗಾಗಿ ಶ್ರೇಷ್ಠ

ಸಹಾಬರನ್ನು ಒಟ್ಟುಸೇರಿಸಿದರು. ಹಿಜಾಝಿನ ಸೈನ್ಯಗಳೊಂದಿಗೆ ಹಝ್ರತ್ ಉಮರ್(ರ) ಸ್ವತಃ ರವಾನೆಯಾಗಲು ಹಾಗೂ ಸಿರಿಯ, ಯಮನ್ ಮತ್ತು ಕೂಫದಿಂದ ಸೈನ್ಯಗಳನ್ನು ನಹಾವಂದಿಗೆ ತರಿಸಲು ಹಝ್ರತ್ ಉಸ್ಮಾನ್(ರ) ಸಲಹೆ ನೀಡಿದರು. ಹೆಚ್ಚಿನ ಸಹಾಬರು ಈ ಸಲಹೆಯನ್ನು ಇಷ್ಟಪಟ್ಟರು. ಆದರೆ ಹಝ್ರತ್ ಅಲಿ(ರ) ಹೀಗೆ ಅಭಿಪ್ರಾಯಪಟ್ಟರು: ನೀವು ಸ್ವತಃ ರವಾನೆಯಾದರೆ, ಮುಸ್ಲಿಮರು ನಿಮ್ಮೊಂದಿಗೆ ಜೊತೆ ಸೇರಲು ಎದ್ದೇಳುವರು. ಹಾಗೆ ಒಂದು ದೊಡ್ಡ ಅಪಾಯ ಇಲ್ಲಿ ಉಂಟಾಗುವುದು. ಆದ್ದರಿಂದ ಮುಸ್ಲಿಮ್ ರಾಜ್ಯಗಳು ತಮ್ಮ ಸೈನ್ಯದ ಒಂದೊಂದು ಭಾಗವನ್ನು ಇರಾನಿಗೆ ರವಾನಿಸಲು ನೀವು ಮುಸ್ಲಿಮ್ ರಾಜ್ಯಗಳಿಗೆ ಸಂದೇಶ ಕಳುಹಿಸಿರಿ. ಉಳಿದ ಸೈನ್ಯ ತಮ್ಮ ತಮ್ಮ ಪ್ರದೇಶಗಳಲ್ಲಿ ಸಂರಕ್ಷಣೆಗಾಗಿ ಅಲ್ಲೇ ಇರಲಿ. ಹಝ್ರತ್ ಉಮರ್(ರ) ಈ ಅಭಿಪ್ರಾಯವನ್ನು ಒಪ್ಪಿಕೊಂಡು ಹಝ್ರತ್ ನುಅ್‌ಮಾನ್ ಬಿನ್ ಮುಖ್‌ರನ್(ರ)ರನ್ನು ಸೈನ್ಯದ ಕಮಾಂಡರ್ ಆಗಿ ನಿಶ್ಚಯಿಸಿದರು. ಹಝ್ರತ್ ಉಮರ್(ರ) ಕೂಫದಲ್ಲಿದ್ದ ಹಝ್ರತ್ ನುಅ್‌ಮಾನ್‌ರಿಗೆ ಹೀಗೆ ಪತ್ರ ಬರೆದರು: ಬಿಸ್ಮಿಲ್ಲಾಹಿರ್ರಹ್ಮಾನಿರ್ರಹೀಂ. ನುಅ್‌ಮಾನ್ ಬಿನ್ ಮುಖ್‌ರನ್‌ರಿಗೆ, ಅಸ್ಸಲಾಮು ಅಲೈಕುಂ. ನಾನು ಅಲ್ಲಾಹನನ್ನು ಸ್ತುತಿಸುತ್ತೇನೆ. ಅವನಲ್ಲದೇ ಬೇರೆ ಆರಾಧ್ಯನಿಲ್ಲ. ಅಮ್ಮಾ ಬಅದ್, ನಹಾವಂದ್ ಪಟ್ಟಣದಲ್ಲಿ ಇರಾನಿಯರ ಒಂದು ಶಕ್ತಿಶಾಲಿ ಸೈನ್ಯ ನಿಮ್ಮನ್ನು ಎದುರಿಸಲು ಒಟ್ಟುಸೇರಿದೆ ಎಂದು ನನಗೆ ಮಾಹಿತಿ ಲಭಿಸಿದೆ. ನನ್ನ ಈ ಪತ್ರ ನಿಮಗೆ ಲಭಿಸುವಾಗ ಅಲ್ಲಾಹನ ಆದೇಶ ಮತ್ತು ಅವನ ನೆರವು ಮತ್ತು ಸಹಾಯದೊಂದಿಗೆ ನಿಮ್ಮ ಜೊತೆಯಲ್ಲಿರುವ ಮುಸ್ಲಿಮರನ್ನು ಸೇರಿಸಿ ರವಾನೆ ಆಗಿರಿ. ಆದರೆ ನಡೆಯಲು ಕಷ್ಟಕರವಾದಂತಹ ಒಣ ಪ್ರದೇಶಗಳಲ್ಲಿ ಅವರನ್ನು ಕೊಂಡುಹೋಗದಿರಿ. ಅವರು ಕೃತಘ್ನತೆ ತೋರಿಸುವಂತಾಗುವ ರೀತಿಯಲ್ಲಿ ಅವರ ಹಕ್ಕುಗಳಲ್ಲಿ ಕೊರತೆ ಉಂಟುಮಾಡದಿರಿ. ಅದೇ ರೀತಿಯಲ್ಲಿ ಯಾವುದೇ ಕೆಸರಿನ ಪ್ರದೇಶಗಳಿಗೆ ಅವರನ್ನು ಕೊಂಡು ಹೋಗದಿರಿ. ಏಕೆಂದರೆ ಒಬ್ಬ ಮುಸ್ಲಿಮನು ನನಗೆ ಒಂದು ಲಕ್ಷ ದೀನಾರಿಗಿಂತಲೂ ಪ್ರಿಯವಾಗಿರುತ್ತಾನೆ. ವಸ್ಸಲಾಂ ಅಲೈಕ್.

ಈ ಆದೇಶವನ್ನು ಅನುಸರಿಸುತ್ತಾ ಹಝ್ರತ್ ನೂಮಾನ್ ಶತ್ರುಗಳನ್ನು ಎದುರಿಸಲು ರವಾನೆಯಾದರು. ಅವರೊಂದಿಗೆ ಕೆಲವು ವಿಶಿಷ್ಟ ಮತ್ತು ಧೈರ್ಯಶಾಲಿ ಮುಸ್ಲಿಮರು ಸಹ ಈ ಯುದ್ಧದಲ್ಲಿ ಭಾಗಿಯಾದರು. ಹಝ್ರತ್ ಉಮರ್(ರ) ಹೀಗೆ ನಿರ್ದೇಶನ ನೀಡಿದರು: ನೂಮಾನ್ ಶಹೀದಾದರೆ ಹುದೈಫ ಬಿನ್ ಯಮಾನ್ ಮತ್ತು ಅವರ ನಂತರ ಜರೀರ್ ಬಿನ್ ಅಬ್ದುಲ್ಲಾಹ್ ಬಜಲಿ, ಅನಂತರ ಮುಗೈರ ಬಿನ್ ಶುಅಬ, ಅನಂತರ ಅಶ್‌ಅಶ್ ಬಿನ್ ಖೈಸ್ ಅಮೀರ್ ಆಗುವರು. ನಹಾವಂದಿನ ತನಕ ಮಾರ್ಗವು ಸುರಕ್ಷಿತವಾಗಿದೆ ಎಂದು ನುಅ್‌ಮಾನ್ ಗುಪ್ತಚರರ ಮೂಲಕ ತಿಳಿದುಕೊಂಡರು. ಇರಾನೀ ಸೈನಿಕರ ಸಂಖ್ಯೆ ಅರುವತ್ತು ಸಾವಿರ ಅಥವಾ ಒಂದು ಲಕ್ಷವಾಗಿತ್ತು ಎಂದು ಚರಿತ್ರೆಗಾರರು ಬರೆದಿರುವರು. ಆದರೆ ಅವರ ಸಂಖ್ಯೆ ನಲ್ವತ್ತು ಸಾವಿರವಾಗಿತ್ತು ಎಂದು ಬುಖಾರಿಯಲ್ಲಿದೆ. ಶತ್ರುಗಳ ಬೇಡಿಕೆ ಪ್ರಕಾರ ಮಾತುಕತೆಗಾಗಿ ಹಝ್ರತ್ ಮುಗೈರ್ ಬಿನ್ ಶುಅಬ ಹೋದರು. ಇರಾನಿಯರು ಬಹಳ ವೈಭವದಿಂದ ಸಭೆಯನ್ನು ಸಂಘಟಿಸಿದ್ದರು. ಇರಾನಿನ ಸೇನಾಧಿಪತಿಯು ಹಳೆಯ ವಾಡಿಕೆಯಂತೆ ಅರೇಬಿಯರ ಜೀವಿತದ ಪ್ರತಿಯೊಂದು ಮಗ್ಗುಲುಗಳ ಬಗ್ಗೆ ನಿಂದನೀಯವಾದ ರೀತಿಯಲ್ಲಿ ವರ್ಣಿಸಿದ. ಹಝ್ರತ್ ಮುಗೈರ ಅದಕ್ಕೆ ಉತ್ತರವಾಗಿ ಹೇಳಿದರು: ಈಗ ಆ ಕಾಲ ಹೊರಟು ಹೋಯಿತು. ಹಝ್ರತ್ ಪೈಗಂಬರ್(ಸ)ರ ಆಗಮನವು ಅರೇಬಿಯದ ರೂಪವನ್ನೇ ಬದಲಿಸಿದೆ. ಅಂತೂ ಈ ರಾಯಭಾರ ವಿಫಲಗೊಂಡಿತು. ಯುದ್ಧದ ಆರಂಭದಲ್ಲಿ ಸೆಣಸಾಟ ಶುರುವಾಯಿತು. ಯುದ್ಧ ಭೂಮಿಯ ಸ್ಥಿತಿ ಮುಸ್ಲಿಮರಿಗೆ ಅತ್ಯಂತ ಕ್ಲಿಷ್ಟಕರವಾಗಿತ್ತು. ಶತ್ರುಗಳು ಕಂದಕಗಳ, ಕೋಟೆಗಳ ಮತ್ತು ಕಟ್ಟಡಗಳ ಕಾರಣದಿಂದ ಸುರಕ್ಷಿತರಾಗಿದ್ದರು. ಮುಸ್ಲಿಮರು ತೆರೆದ ಮೈದಾನದಲ್ಲಿದ್ದರು. ಶತ್ರುಗಳು ತಕ್ಕುದಾದ ಸಂದರ್ಭಗಳಲ್ಲಿ ಹೊರಗೆ ಬಂದು ಅಚಾನಕ್ಕಾಗಿ ದಾಳಿ ನಡೆಸುತ್ತಿದ್ದರು. ಈ ವಿಷಮಕರವಾದ ಸ್ಥಿತಿಯಲ್ಲಿ ಇಸ್ಲಾಮಿನ ಸೈನ್ಯದ ಅಮೀರ್ ನುಅ್‌ಮಾನ್ ಬಿನ್ ಮುಖ್‌ರನ್ ಸಮಾಲೋಚನೆಗಾಗಿ ಸಭೆಯನ್ನು ನಡೆಸಿದರು. ವಿವಿಧ ಅಭಿಪ್ರಾಯಗಳ ನಂತರ ತುಲೈಹರ ಕಡೆಯಿಂದ ಈ ಒಂದು ಅಭಿಪ್ರಾಯ ಮುಂದೆ ಬಂತು: ಶತ್ರುಗಳ ಕಡೆಗೆ ಒಂದು ಸಣ್ಣ ಸೈನ್ಯವನ್ನು ಕಳುಹಿಸಬೇಕು. ಅವರು ಬಿಲ್ಲುಗಾರಿಕೆಯ ಮೂಲಕ ಯುದ್ಧವನ್ನು ಹೊತ್ತಿಸಬೇಕು. ಶತ್ರುಗಳು ಹೋರಾಟಕ್ಕಾಗಿ ಹೊರಟರೆ ಮುಸ್ಲಿಮರ ಈ ಸಣ್ಣ ಸೈನ್ಯ ಸೋತು ಹೋಗುವಂತೆ ತೋರಿಸಬೇಕು. ವಿಜಯದ ಆಸೆಯಿಂದ ಶತ್ರುಗಳು ಇನ್ನೂ ಮುಂದಕ್ಕೆ ಬರುವರು ಮತ್ತು ಅವರು ಹೊರಗೆ ತೆರೆದ ಮೈದಾನಕ್ಕೆ ಬರುವಾಗ ನಾವು ಅವರನ್ನು ಸರಿಯಾಗಿ ಹಿಡಿಯುವೆವು. ಈ ಸಲಹೆಯನ್ನು ಕಾರ್ಯಗತಗೊಳಿಸಲು ಹಝ್ರತ್ ನೂಮಾನ್(ರ) ಹಝ್ರತ್ ಖಅ್‌ಖಾಅ್‌ರನ್ನು ಆಯ್ಕೆ ಮಾಡಿದರು. ಅವರು ತುಲೈಹರ ಸಲಹೆಯಂತೆ ನಡೆದಾಗ ತುಲೈಹ ಯೋಚಿಸಿದಂತೆಯೇ ನಡೆಯಿತು. ಹಝ್ರತ್ ನುಅ್‌ಮಾನ್ ಪೈಗಂಬರರ ಪ್ರೇಮಿಯಾಗಿದ್ದರು. ಬೆಳಿಗ್ಗೆ ಯುದ್ಧ ಶುರುವಾಗದಿದ್ದರೆ ಮಧ್ಯಾಹ್ನದ ನಂತರ ಹಝ್ರತ್ ಪೈಗಂಬರ್(ಸ) ಯುದ್ಧದ ತಯಾರಿ ನಡೆಸುತ್ತಿದ್ದರು. ಶತ್ರುಗಳ ಸೈನ್ಯ ಮುಂದಕ್ಕೆ ಧಾವಿಸಿ ಇಸ್ಲಾಮಿನ ಸೈನ್ಯದ ಸಮೀಪ ತಲುಪಿದಾಗ ಅನೇಕ ಮುಸ್ಲಿಂ ಸಿಪಾಯಿಗಳು ಹೋರಾಟಕ್ಕಾಗಿ ವ್ಯಾಕುಲಗೊಂಡು ಹಝ್ರತ್ ನುಅ್‌ಮಾನ್‌ರ ಬಳಿಗೆ ಅನುಮತಿಗಾಗಿ ತಲುಪಿದರು. ಆದರೆ ಹಝ್ರತ್ ನುಅ್‌ಮಾನ್ ಅನುಮತಿ ಕೊಡಲಿಲ್ಲ. ಅನೇಕ ಮುಖ್ಯ ಸರದಾರರು ಸಹ ಹೋರಾಟಕ್ಕಾಗಿ ಅನುಮತಿ ಕೊಡಲು ಅವರಿಗೆ ಸಲಹೆ ನೀಡಿದರು. ಆದರೆ ಅವರು ಸಹನೆ ಕೈಗೊಳ್ಳಲು ಉಪದೇಶಿಸುತ್ತಿದ್ದರು. ಮಧ್ಯಾಹ್ನ ಆದ ನಂತರ ಹಝ್ರತ್ ನುಅ್‌ಮಾನ್ ಪೂರ್ತಿ ಸೈನ್ಯವನ್ನು ಸುತ್ತಿ ನೋಡಿದರು ಮತ್ತು ಅತ್ಯಂತ ನೋವುಭರಿತ ಪದಗಳೊಂದಿಗೆ ಭಾಷಣ ಮಾಡಿದರು. ತನ್ನ ಶಹಾದತಿಗಾಗಿ ದುಆ ಮಾಡಿದರು ಅದನ್ನು ಕೇಳಿ ಜನರು ಅಳಲು ಪ್ರಾರಂಭಿಸಿದರು. ನಂತರ ಸಂದರ್ಭ ಸಿಕ್ಕಿದಾಗ ಯುಕ್ತಿಯಿಂದ ಮುಸ್ಲಿಮರು ಶತ್ರುಗಳ ಪಂಕ್ತಿಗಳ ಮೇಲೆ ದಾಳಿ ನಡೆಸಿದರು. ಹಝ್ರತ್ ನುಅ್‌ಮಾನ್ ಅತ್ಯಂತ ಧೈರ್ಯದಿಂದ ಹೋರಾಡುತ್ತಾ ಶಹೀದ್ ಆದರು. ಆದರೆ ಯುದ್ಧದ ಪರಿಣಾಮ ಗೊತ್ತಾಗುವ ತನಕ ಅವರು ಶಹೀದ್ ಆದದ್ದನ್ನು ಹಝ್ರತ್ ಹುದೈಫ ಬಿನ್ ಯಮಾನ್ ಮತ್ತು ನಈಂ ಬಿನ್ ಮುಖ್‌ರನ್ ರಹಸ್ಯವಾಗಿ ಇರಿಸಿದರು. ಇನ್ನೊಂದು ವರದಿಯಲ್ಲಿ ಮಅ್‌ಖಿಲ್

ವರದಿ ಮಾಡುತ್ತಾರೆ: ವಿಜಯದ ನಂತರ ನಾನು ಹಝ಼್ರತ್ ನುಅ್‌ಮಾನ್‌ರ ಬಳಿಗೆ ಹೋದೆನು. ಅವರಲ್ಲಿ ಜೀವಕಳೆ ಬಾಕಿಯಿತ್ತು. ಅವರು ವಿಚಾರಿಸಿದಾಗ ಅಲ್ಲಾಹನ ಕಡೆಯಿಂದ ವಿಜಯ ಲಭಿಸಿದೆ ಎಂದು ನಾನು ಹೇಳಿದೆ. ಆಗ ಅವರು ಹೇಳಿದರು: ಹಝ಼್ರತ್ ಉಮರ್‌ರಿಗೆ ತಿಳಿಸಿರಿ.

ಹಝ಼್ರತ್ ಉಮರ್(ರ) ಬಹಳ ತಳಮಳದಿಂದ ಯುದ್ಧದ ಪರಿಣಾಮವನ್ನು ಕಾಯುತ್ತಿದ್ದರು. ಯುದ್ಧ ನಡೆಯಲು ಸಾಧ್ಯವಿದ್ದ ರಾತ್ರಿ ಹಝ಼್ರತ್ ಉಮರ್(ರ) ಅತ್ಯಂತ ಕಳವಳದೊಂದಿಗೆ ನಿದ್ದೆ ಮಾಡದೇ ರಾತ್ರಿ ಕಳೆದರು. ಪ್ರಸವ ವೇದನೆಯನ್ನು ಅನುಭವಿಸುವ ಸ್ತ್ರೀಯ ಹಾಗೆ ನೋವಿನಿಂದ ದುಆ ಮಾಡುವುದರಲ್ಲಿ ಅವರು ನಿರತರಾಗಿದ್ದರು ಎಂದು ತೋರುತ್ತಿತ್ತು. ವಿಜಯದ ಸುವಾರ್ತೆಯನ್ನು ತರುತ್ತಾ ದೂತ ಮದೀನಕ್ಕೆ ತಲುಪಿದರು. ಹಝ಼್ರತ್ ಉಮರ್(ರ) ಅಲ್‌ಹಮ್ದುಲಿಲಾಹ್ ಎಂದು ಹೇಳಿದರು ಮತ್ತು ನುಅ್‌ಮಾನಿನ ಕ್ಷೇಮದ ಬಗ್ಗೆ ವಿಚಾರಿಸಿದರು. ಅವರ ನಿಧನದ ವಾರ್ತೆಯನ್ನು ದೂತನು ಹೇಳಿದಾಗ ಹಝ಼್ರತ್ ಉಮರ್(ರ) ಬಹಳ ದುಃಖಗೊಂಡರು ಮತ್ತು ತಲೆಯಲ್ಲಿ ಕೈಯಿಟ್ಟು ಅಳುತ್ತಿದ್ದರು. ದೂತನು ಇತರ ಶಹೀದರ ಹೆಸರನ್ನು ಹೇಳಿದರು ಮತ್ತು ಹೀಗೆ ಹೇಳಿದರು: ಅಮೀರುಲ್ ಮೂಅ್‌ಮಿನೀನ್, ಬೇರೆಯೂ ಅನೇಕ ಮುಸ್ಲಿಮರು ಶಹೀದ್ ಆಗಿರುವರು. ಅವರು ನಿಮಗೆ ಪರಿಚಯವಿಲ್ಲ. ಹಝ಼್ರತ್ ಉಮರ್(ರ) ಅಳುತ್ತಾ ಹೇಳಿದರು: ಅವರು ಉಮರನಿಗೆ ಪರಿಚಯವಿಲ್ಲವಾದರೆ ಏನೂ ನಷ್ಟವಿಲ್ಲ. ಅಲ್ಲಾಹನು ಅವರನ್ನು ಅರಿಯುತ್ತಾನೆ. ಅವರು ಮುಸ್ಲಿಮರ ಎಡೆಯಲ್ಲಿ ಪ್ರಸಿದ್ಧರಲ್ಲವಾಗಿರಬಹುದು ಆದರೆ ಅಲ್ಲಾಹನು ಅವರಿಗೆ ಶಹಾದತ್ ನೀಡಿ ಗೌರವಿಸಿದ್ದಾನೆ. ಅಲ್ಲಾಹನು ಅವರನ್ನು ಅರಿಯುತ್ತಾನೆ. ಉಮರ್ ಅವರನ್ನು ಅರಿಯುವುದರಿಂದ ಏನು ಪ್ರಯೋಜನ?

ಯುದ್ಧದ ನಂತರ ಮುಸ್ಲಿಮರು ಹರ್ಮ್ಝ಼ಾನ್ ತನಕ ಶತ್ರುಗಳನ್ನು ಹಿಂಬಾಲಿಸಿದರು. ಇದನ್ನು ನೋಡಿ ಆ ಪಟ್ಟಣಗಳಿಂದ ಮುಸ್ಲಿಮರ ಮೇಲೆ ದಾಳಿ ನಡೆಯದು ಎಂಬ ಭರವಸೆಯ ಮೇರೆಗೆ ಇರಾನಿನ ಸರ್ದಾರ ಖುಸ್‌ರೂ ಶುನೂಮ್ ಸಂಧಾನ ಮಾಡಿದರು. ಇಸ್ಲಾಮಿನ ಸೈನ್ಯ ನಹಾವಂದ್ ಪಟ್ಟಣವನ್ನು ವಶಪಡಿಸಿತು. ನಹಾವಂದಿನ ವಿಜಯ ಪರಿಣಾಮಗಳ ದೃಷ್ಟಿಯಲ್ಲಿ ಬಹಳ ಮುಖ್ಯವಾಗಿತ್ತು. ಇದರ ನಂತರ ಇರಾನಿಯರಿಗೆ ಒಂದು ಜಾಗದಲ್ಲಿ ಒಟ್ಟುಸೇರಿಕೊಂಡು ಯುದ್ಧ ಮಾಡುವ ಅವಕಾಶ ಸಿಗಲಿಲ್ಲ. ಮುಸ್ಲಿಮರು ಈ ಜಾಗವನ್ನು ಫತಹುಲ್‌ಫುತೂಹ್ ಎಂಬ ಹೆಸರಿನಿಂದ ನೆನಪಿಡಲು ತೊಡಗಿದರು. ನಹಾವಂದಿನ ನಂತರ ಮುಸ್ಲಿಮರು ಅಸ್‌ಫಹಾನ್ ಮತ್ತು ಹರ್ಮ್ಝ಼ಾನನ್ನು ಜಯಿಸಿದರು.

(ಖುತ್ಬದ ಕೊನೆಯ ಭಾಗದಲ್ಲಿ ಹುಝೂರ್, ಇತ್ತೀಚೆಗೆ ನಿಧನರಾದ ಇಂಡೋನೇಶಿಯದ ಸನ್ಮಾನ್ಯ ಮುಹಮ್ಮದ್ ದಿಯಾನ್‌ತೂನೋ ಸಾಹಿಬ್, ಸನ್ಮಾನ್ಯ ಸಾಹಿಬ್‌ಝ಼ಾದ ಫರ್‌ಹಾನ್ ಲತೀಫ್ ಸಾಹಿಬ್ ಆಫ್ ಚಿಕಾಗೋ ಅಮೇರಿಕ, ಮತ್ತು ಪಾಕಿಸ್ತಾನದ ದಾಊದ್ ಖೈಲ್ ಮಿಯಾನ್‌ವಾಲಿ ಜಮಾಅತಿನ ಮಾಜಿ ಅಮೀರ್ ಆದ ಸನ್ಮಾನ್ಯ ಮಲಿಕ್ ಮುಬಶ್ಶಿರ್ ಅಹ್ಮದ್ ಸಾಹಿಬ್‌ರ ಬಗ್ಗೆ ಪ್ರಸ್ತಾಪಿಸಿದರು ಮತ್ತು ಜನಾಝ಼ ಗಾಇಬ್ ನಮಾಝ಼್ ನಿರ್ವಹಿಸುವುದಾಗಿ ಘೋಷಿಸಿದರು.)

*****

اَلْحَمْدُ لِلّٰهِ نَحْمَدُهٗ وَنَسْتَعِيْنُهٗ وَنَسْتَغْفِرُهٗ وَنُؤْمِنُ بِهٖ وَنَتَوَكَّلُ عَلَيْهِ وَنَعُوْذُ بِاللّٰهِ مِنْ شُرُوْرِ اَنْفُسِنَا وَمِنْ سَيِّئَاتِ اَعْمَالِنَا مَنْ يَّهْدِهِ اللّٰهُ فَلَا مُضِلَّ لَهٗ وَمَنْ يُّضْلِلْهُ فَلَاهَادِيَ لَهٗ ۔ وَنَشْهَدُ اَنْ لَّآ اِلٰهَ اِلَّا اللّٰهُ وَنَشْهَدُ اَنَّ مُحَمَّدًا عَبْدُهٗ وَرَسُوْلُهٗ عِبَادَ اللّٰهِ رَحِمَكُمُ اللّٰهُ اِنَّ اللّٰهَ يَاْمُرُ بِالْعَدْلِ وَالْاِحْسَانِ وَاِيْتَاءِ ذِي الْقُرْبٰى وَيَنْهٰى عَنِ الْفَحْشَآءِ وَالْمُنْكَرِ وَالْبَغْيِ يَعِظُكُمْ لَعَلَّكُمْ تَذَكَّرُوْنَ ۝ اُذْكُرُوا اللّٰهَ يَذْكُرْكُمْ وَادْعُوْهُ يَسْتَجِبْ لَكُمْ وَلَذِكْرُ اللّٰهِ اَكْبَرُ.

***Friday Sermon delivered by Hadrath Khaleefatul Masih Al Khamis*** *(atba)*

*At, Masjid Mubarak, Islamabad, Tilford, UK, On 20-08-2021*

**Summarized by** *Majlis Ansarullah Bharat*

***Kannada Translation***: Moulavi Inamullah for Kannada Desk, Qadian

***Reviewed by***: M.P Ibrahim |***Layout***: U Basheer Ahmad

***Published By***: Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon